# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1282 |
| ಸದಸ್ಯರ ಹೆಸರು | : | ಶ್ರೀ ಎಂ.ನಾಗರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.12.2024 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಟ್ರಾಫಿಕ್ ಸಮಸ್ಯೆಯನ್ನು ಪರಿಹರಿಸಲು ಪೊಲೀಸ್ ಇಲಾಖೆಯಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸುತ್ತಿರುವ ಮಾಹಿತಿ ನಿಜವೇ; ಹಾಗಿದ್ದಲ್ಲಿ, ಆ ತಂತ್ರಜ್ಞಾನದ ಕುರಿತು ವಿವರವಾದ ಮಾಹಿತಿ ನೀಡುವುದು; | ಹೌದು.<br>**<u>1. ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್ ಮೆಂಟ್ ಸಿಸ್ಟಮ್ :</u>**<br>ಬೆಂಗಳೂರು ನಗರ ಸಂಚಾರ ಪೊಲೀಸ್ ಘಟಕವು ತಂತ್ರಜ್ಞಾನದ ಬಳಕೆ ಹಾಗೂ ಸಂಯೋಜನೆಗಳನ್ನು ಸುಗಮ, ಸುರಕ್ಷಿತ ಸಂಚಾರ ನಿರ್ವಹಣೆಗಾಗಿ ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ. ಅಂತಹ ಹಲವು ತಂತ್ರಜ್ಞಾನಗಳಲ್ಲಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐ.ಟಿ.ಎಂ.ಎಸ್) ಕೂಡ ಒಂದಾಗಿರುತ್ತದೆ. ಈ ವ್ಯವಸ್ಥೆಯನ್ನು ಡಿಸೆಂಬರ್-2022 ರಿಂದ ನಗರದ ಪ್ರಮುಖ 50 ಜಂಕ್ಷನ್‌ಗಳಲ್ಲಿ ಜಾರಿಗೆ ತರಲಾಗಿದ್ದು, ಒಟ್ಟು 250 ಎ.ಎನ್.ಪಿ.ಆರ್ (ಆಟೋ ಮ್ಯಾಟಿಕ್ ನಂಬರ್ ಪ್ಲೇಟ್ ರಿಕಗ್ನಿಷನ್) ಹಾಗೂ 80 ಆರ್.ಎಲ್.ವಿ.ಡಿ. (ರೆಡ್‌ಲೈಟ್ ವೈಲೇಷನ್ ಡಿಟೆಕ್ಷನ್) ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ. ಈ ವ್ಯವಸ್ಥೆಯು ಸಂಪರ್ಕರಹಿತ ಸ್ವಯಂಚಾಲಿತ ಸಂಚಾರ ಉಲ್ಲಂಘನೆ ಪತ್ತೆ ಮತ್ತು ನಿಯಮ ಜಾರಿಗಾಗಿ ಇರುವ ಉತ್ತಮ ವ್ಯವಸ್ಥೆಯಾಗಿರುತ್ತದೆ.<br><br>**<u>2. ಎಟಿಸಿಎಸ್ ಸಿಗ್ನಲ್‌ಗಳು :</u>**<br>ಅಡಾಪ್ಟೀವ್ ಟ್ರಾಫಿಕ್ ಕಂಟ್ರೋಲ್ ಸಿಸ್ಟಮ್ ಅನ್ನು ಅತ್ಯುತ್ತಮ ಸಿಗ್ನಲಿಂಗ್ ಮತ್ತು ಸಂಚಾರದ ಹರಿವನ್ನು ಹೆಚ್ಚು ವ್ಯವಸ್ಥಿತವಾಗಿ ಮಾಡಲು ಬಳಸಲಾಗುತ್ತಿದೆ. ಈ ತಂತ್ರಾಜ್ಞಾನದ ಅಳವಡಿಕೆಯಿಂದ ಸ್ಮಾರ್ಟ್ ಟ್ರಾಫಿಕ್ ನಿರ್ವಹಣೆಯನ್ನು ಕೈಗೊಳ್ಳಲು ಸಹಕಾರಿಯಾಗಿದೆ. ಸಂಚಾರದ ಹರಿವಿನೊಂದಿಗೆ ಹೊಂದಿಕೊಂಡು ಹಸಿರು ಸಮಯದ ಪರಿಣಾಮಕಾರಿ ಬಳಕೆಯಿಂದ ಸುಗಮ ಸಂಚಾರ ನಿರ್ವಹಣೆಗೆ ಸಹಕಾರಿಯಾಗಿದೆ.<br><br>**<u>3. ಅಸ್ತ್ರಂ:</u>** ASTRAM (Actionable Intelligence for Sustainable Traffic Management) ಎಂಬ ವಿನೂತನ ಉಪಕ್ರಮವು ನಗರದ ಸಂಚಾರದ ಹರಿವಿನ ಬಗ್ಗೆ ಒಳ ನೋಟಗಳನ್ನು ನೀಡುವ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ಇದಾಗಿದೆ. ಇದು ಪರಿಣಾಮಕಾರಿಯಾದ ಸಂಚಾರ ನಿರ್ವಹಣೆಗೆ, ಲಭ್ಯವಿರುವ ದತ್ತಾಂಶವನ್ನು ಬಳಸಿಕೊಂಡು ಸೂಕ್ತ ಕ್ರಮ ಜರುಗಿಸಿ ಸುಗಮ ಸಂಚಾರ ನಿರ್ವಹಣೆಗೆ ಅನುವು ಮಾಡಿಕೊಡುತ್ತದೆ. ಇದರಲ್ಲಿ ಮುಖ್ಯವಾಗಿ ಕಂಜೆಷನ್ ಅಲರ್ಟ್‌ಗಳು, ಬಿಟಿಟಿ ಆಧಾರಿತ ಇನ್ಸಿಡೆಂಟ್ ರಿಪೋರ್ಟಿಂಗ್ ಹಾಗೂ ಇವೆಂಟ್ ಮ್ಯಾನೇಜ್‌ಮೆಂಟ್ ಮತ್ತು ಡ್ಯಾಶ್ ಬೋರ್ಡ್ ಅನಾಲಿಟಿಕ್ಸ್‌ಗಳನ್ನು ಒಳಗೊಂಡಿದೆ.<br><br>➢ **ಕಂಜೆಷನ್ ಅಲರ್ಟ್‌ಗಳು**:<br>ಈ ಉಪಕ್ರಮದಿಂದ ನೈಜ ಸಮಯದಲ್ಲಿ ಠಾಣೆಯ ಯಾವ ರಸ್ತೆಯಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದೆಯೆಂಬ ಬಗ್ಗೆ ಠಾಣಾಧಿಕಾರಿಗೆ ಪ್ರತಿ 15 ನಿಮಿಷಕ್ಕೊಮ್ಮೆ ಎಚ್ಚರಿಕೆ ಸಂದೇಶ (ಅಲರ್ಟ್) ಬರುತ್ತದೆ. ಇದನ್ನು ಈ-ಅಟೆಂಡೆನ್ಸ್ ಆ್ಯಪ್‌ನ ಜೊತೆಗೆ |

| | | |
|---|---|---|
| | | ಸಂಯೋಜಿಸಲಾಗಿದ್ದು ಜಂಕ್ಷನ್‌ನಲ್ಲಿರುವ ಸಂಚಾರ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೂ ಸಹ ಲಭ್ಯವಾಗುವುದರಿಂದ ಸುಗಮ ಸಂಚಾರಕ್ಕೆ ಅನುಕೂಲಕರವಾಗಲಿದೆ.<br><br>➢ **<u>ಡ್ಯಾಶ್ ಬೋರ್ಡ್ ಅನಾಲಿಟಿಕ್ಸ್</u>**:<br>ಸಂಚಾರದ ಹರಿವಿನ ಬಗ್ಗೆ ಮತ್ತು ರಸ್ತೆ ಸುರಕ್ಷತೆಯ ಕುರಿತು ಕೈಗೊಳ್ಳಬಹುದಾದ ಅಗತ್ಯ ಮುನ್ನೆಚ್ಚರಿಕೆಯ ಬಗ್ಗೆ ಈ ಉಪಕ್ರಮವು ಸಹಕಾರಿಯಾಗಲಿದೆ. ದಟ್ಟಣೆಯ ಉದ್ದ, ವಾಹನಗಳ ಸಂಖ್ಯೆ, ವಾಹನಗಳ ವಿಧ ಇತ್ಯಾದಿಗಳ ಬಗ್ಗೆ ಇದು ಮಾಹಿತಿಯನ್ನು ನೀಡುವುದರೊಂದಿಗೆ ಪರಿಣಾಮಕಾರಿ ಸಂಚಾರ ನಿರ್ವಹಣೆಗೆ ಸಹಾಯಕವಾಗುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಉಂಟಾಗಬಹುದಾದ ದಟ್ಟಣೆ ಬಗ್ಗೆ ಪ್ರಿಡಿಕ್ಟಿವ್ ಅನಾಲಿಸಿಸ್ ಸಹ ಲಭ್ಯವಾಗುವುದರಿಂದ ಈ ದತ್ತಾಂಶವು ಸೂಕ್ತ ಸಂಚಾರ ಯೋಜನೆಯನ್ನು ರೂಪಿಸಲು ಸಹಾಯಕವಾಗುತ್ತದೆ.<br><br>➢ **<u>ಬಿಓಟಿ ಬಳಕೆ ಮುಖಾಂತರ ಇನ್ಸಿಡೆಂಟ್ ರಿಪೋರ್ಟಿಂಗ್</u>**:<br>ಇದರ ಬಹುಮುಖ ಉದ್ದೇಶವೆಂದರೆ, ಅಧಿಕೃತ ಅಧಿಕಾರಿಗಳಿಂದ ರಸ್ತೆಯ ಮೇಲೆ ನಡೆಯುವ ಯಾವುದೇ ಕೃತ್ಯದ ಬಗ್ಗೆ ಗೂಗಲ್ ಮ್ಯಾಪ್ ಅಥವಾ ಇನ್ನಿತರ ಮ್ಯಾಪ್‌ಗಳ ಮುಖೇನ ಮಾಹಿತಿಯನ್ನು ರಸ್ತೆ ಬಳಕೆದಾರರಿಗೆ ನೈಜ ಸಮಯದಲ್ಲಿ ತಲುಪಿಸುವುದರ ಜೊತೆಗೆ ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ. ರಸ್ತೆ ಕಾಮಗಾರಿ, ವಾಹನ ದುರಸ್ತಿ, ಮರ ಬಿದ್ದಿರುವ ಬಗ್ಗೆ, ರಸ್ತೆ ಮುಚ್ಚಲಾಗಿರುವ ಬಗ್ಗೆ ಮ್ಯಾಪ್‌ಗಳಲ್ಲಿ ಮಾಹಿತಿಯನ್ನು ಕ್ರೋಢೀಕರಿಸಿರುವುದರಿಂದ ರಸ್ತೆ ಬಳಕೆದಾರರಿಗೆ ಸಹಕಾರಿಯಾಗುತ್ತಿದೆ.<br><br>➢ **<u>ಇವೆಂಟ್ ಮ್ಯಾನೇಜ್‌ಮೆಂಟ್</u>** :<br>ನಗರದ ವಿವಿಧ ಪ್ರದೇಶಗಳಲ್ಲಿ ನಡೆಯುವ ಕಾರ್ಯಕ್ರಮಗಳು ಮತ್ತು ಅವುಗಳಿಂದ ಉಂಟಾಗುವ ಸಂಚಾರದ ಹರಿವಿನ ವ್ಯತ್ಯಯ ಅಥವಾ ಸಮಸ್ಯೆಗಳ ಬಗ್ಗೆ ಅರ್ಥೈಸಿಕೊಂಡು ಮುಂದಿನ ದಿನಗಳಲ್ಲಿ ಅವುಗಳನ್ನು ನಿವಾರಿಸುವ ಪರಿಹಾರೋಪಾಯಗಳನ್ನು ಕಂಡುಕೊಳ್ಳಲು ಸಹಕಾರಿಯಾಗುತ್ತದೆ. ಸಂಚಾರ ನಿಯಂತ್ರಣ ಕೇಂದ್ರದಲ್ಲಿ ಇವುಗಳ ಬಗ್ಗೆ ಸತತ ನಿಗಾವಣೆ ಮಾಡಲಾಗುತ್ತದೆ.<br><br>➢ **<u>ಇ-ಪಾತ್ ಅಂಬ್ಯುಲೆನ್ಸ್ ಆ್ಯಪ್</u>** :<br>ಈ ಉಪಕ್ರಮದಿಂದ ನಗರದಲ್ಲಿ ಸಂಚರಿಸುವ ಅಂಬ್ಯುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಬಹಳ ಸಹಾಯವಾಗುತ್ತದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಅಂಬ್ಯುಲೆನ್ಸ್ ಗಳನ್ನು ನೋಂದಾಯಿಸಿಕೊಂಡು ಅವುಗಳು ಪ್ರಯಾಣ ಪ್ರಾರಂಭಿಸುವ ಮತ್ತು ತಲುಪಬೇಕಾದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಸಂಚರಣೆಯನ್ನು ಪರಿಶೀಲಿಸಲಾಗುತ್ತದೆ. 120 ಸೆಕೆಂಡ್‌ಗಳಿಗೆ ಮೀರಿದ ಅವಧಿಯವರೆಗೆ ಯಾವುದೇ ಅಂಬ್ಯುಲೆನ್ಸ್ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡಲ್ಲಿ ಈ ಆ್ಯಪ್ ಮುಖೇನ SOS ಬಟನ್ ಆ್ಯಕ್ಟಿವೇಟ್ ಆಗಿ ಕೂಡಲೇ ಅತ್ತಕಡೆ ಗಮನಹರಿಸಿ ಸಂಚಾರ ದಟ್ಟಣೆ ನಿವಾರಣೆ ಮಾಡಲು ಮಾಹಿತಿ ರವಾನೆಯಾಗುತ್ತದೆ. ಈಗಾಗಲೇ 108 ಅಂಬ್ಯುಲೆನ್ಸ್ ಹಾಗೂ ಖಾಸಗಿ ಅಂಬ್ಯುಲೆನ್ಸ್ ಗಳನ್ನು ಆನ್‌ಬೋರ್ಡ್ ಮಾಡಿಕೊಳ್ಳಲಾಗಿದ್ದು, ಸಾಕಷ್ಟು ಉತ್ತಮ ರೀತಿಯಲ್ಲಿ ತುರ್ತು ವಾಹನಗಳಿಗೆ ಸುಲಲಿತ ಸಂಚಾರ ಕಲ್ಪಿಸಲಾಗುತ್ತಿದೆ. |

<table>
<tr><td></td><td></td><td>

➢ **<u>ಡ್ರೋನ್ ಕ್ಯಾಮೆರಾ</u>** :
ಬೆಂಗಳೂರು ನಗರ ಸಂಚಾರ ವಿಭಾಗವು ಹಾಲಿ 10 ಡ್ರೋನ್ ಕ್ಯಾಮೆರಾಗಳನ್ನು ಬೆಳಗಿನ ಮತ್ತು ಸಂಜೆಯ ಪೀಕ್ ಅವರ್‌ಗಳ ಸಮಯದಲ್ಲಿ ಸಂಚಾರದ ಹರಿವನ್ನು ನಿಗಾವಣೆ ಮಾಡಲು ಬಳಸಲಾಗುತ್ತಿದೆ. ಈ ಕ್ಯಾಮೆರಾಗಳಿಂದ ಬರುವ ವಿಡಿಯೋಗಳನ್ನು ಸಂಚಾರ ನಿರ್ವಹಣ ಕೇಂದ್ರದಲ್ಲಿ ನೇರ ಪ್ರಸಾರದಲ್ಲಿ ವೀಕ್ಷಿಸಿ ಸಂಚಾರ ದಟ್ಟಣೆ ನಿಯಂತ್ರಿಸಲು ಕ್ರಮಕೈಗೊಳ್ಳಲಾಗುತ್ತಿದೆ.

➢ **<u>ಸಹಯೋಗದ ಪ್ರಯತ್ನಗಳು</u>**:
ವಿವಿಧ ಏಜೆನ್ಸಿಗಳು, ಪ್ರಧಾನ ಸಂಶೋಧನಾ ಸಂಸ್ಥೆಗಳು ಮತ್ತು ಎನ್.ಜಿ.ಓ (IISc, IIT Madras, RASTA, BAF, CiSTUP) ಗಳ ಸಹಯೋಗದೊಂದಿಗೆ ರಸ್ತೆ ಸುರಕ್ಷತಾ ಕ್ರಮಗಳನ್ನು ಹೆಚ್ಚಿಸಲು ಮತ್ತು ಡೇಟಾ-ಚಾಲಿತ ಒಳನೋಟಗಳು ಮತ್ತು ನವೀನ ಪರಿಹಾರಗಳ ಮೂಲಕ ಸಂಚಾರದ ಹರಿವನ್ನು ಉತ್ತಮಗೊಳಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಬೆಂಗಳೂರು ನಗರದಲ್ಲಿ ಹೊಸದಾಗಿ 165 ಸಿಗ್ನಲ್ ಗಳನ್ನು ಸಿಂಕ್ರನೈಸ್ ಮಾಡಿ ಅಡಾಪ್ಟೀವ್ ಸಿಗ್ನಲ್‌ಗಳ ಅಳವಡಿಕೆ ಮಾಡುವ ಕಾಮಗಾರಿ ಕೂಡ ಪ್ರಗತಿಯಲ್ಲಿರುತ್ತದೆ.

</td></tr>
<tr><td>ಆ)</td><td>ಈ ಟ್ರಾಫಿಕ್ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸ ಲಾಗುತ್ತಿರುವ ಯಂತ್ರೋಪಕರಣಗಳು ಯಾವುವು;</td><td>

ಪ್ರಸ್ತುತ ಬೆಂಗಳೂರು ನಗರ ಸಂಚಾರ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸಲಾಗುತ್ತಿರುವ ಯಂತ್ರೋಪಕರಣಗಳ ವಿವರ ಈ ಕೆಳಕಂಡಂತಿರುತ್ತದೆ:-

<table>
<tr><td>1</td><td>ಎ.ಎನ್.ಪಿ.ಆರ್. ಕ್ಯಾಮೆರಾಗಳು</td><td>250</td></tr>
<tr><td>2</td><td>ಆರ್.ಎಲ್.ವಿ.ಡಿ. ಕ್ಯಾಮೆರಾಗಳು</td><td>80</td></tr>
<tr><td>3</td><td>ಪೋರ್ಟಬಲ್ ಎ.ಎನ್.ಪಿ.ಆರ್. ಕ್ಯಾಮೆರಾಗಳು</td><td>30</td></tr>
<tr><td>4</td><td>ಪಿ.ಟಿ.ಜಡ್. ಕ್ಯಾಮೆರಾಗಳು</td><td>12</td></tr>
<tr><td>5</td><td>ಡ್ರೋನ್ಸ್</td><td>10</td></tr>
<tr><td>6</td><td>ಪೆಲಿಕಾನ್ ಸಿಗ್ನಲ್ ಲೈಟ್ಸ್</td><td>47</td></tr>
<tr><td>7</td><td>ಟ್ರಾಫಿಕ್ ಸಿಗ್ನಲ್‌ಗಳು</td><td>410</td></tr>
<tr><td>8</td><td>ಬ್ಲಿಂಕರ್‌ಗಳು</td><td>600</td></tr>
</table>

ಪ್ರಸ್ತುತ ಬೆಂಗಳೂರು ನಗರದಲ್ಲಿ ಹೊಸದಾಗಿ 165 ಸಿಗ್ನಲ್ ಗಳನ್ನು ಸಿಂಕ್ರನೈಸ್ ಮಾಡಿ ಅಡಾಪ್ಟೀವ್ ಸಿಗ್ನಲ್‌ಗಳ ಅಳವಡಿಕೆ ಮಾಡುವ ಕಾಮಗಾರಿ ಪ್ರಗತಿಯಲ್ಲಿರುತ್ತದೆ.

</td></tr>
<tr><td>ಇ)</td><td>ಈ ಅತ್ಯಾಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳನ್ನು ಭಾರತದ ಯಾವ ಮಹಾನಗರದಲ್ಲಿ ಮತ್ತು ಬೇರೆ ದೇಶಗಳಲ್ಲಿ ಉಪಯೋಗಿಸಲಾಗುತ್ತಿದೆ; (ಮಾಹಿತಿ ನೀಡುವುದು)</td><td>ಭಾರತ ದೇಶದಲ್ಲಿ ಒಟ್ಟು 27 ನಗರಗಳಲ್ಲಿ ಎ.ಟಿ.ಸಿ.ಎಸ್. ಸಿಗ್ನಲ್ ವ್ಯವಸ್ಥೆಯನ್ನು ಉಪಯೋಗಿಸುತ್ತಿರುವ ಬಗ್ಗೆ ಮಾಹಿತಿ ಇರುತ್ತದೆ.</td></tr>
<tr><td>ಈ)</td><td>ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಪೊಲೀಸ್ ಇಲಾಖೆ ವತಿಯಿಂದ ಈ ಅಪರಾಧಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು;</td><td>

ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಪೊಲೀಸ್ ಇಲಾಖೆ ವತಿಯಿಂದ ಕೈಗೊಂಡ ಕ್ರಮಗಳು ಈ ಕೆಳಕಂಡಂತಿವೆ:-

ರಾಜ್ಯದಲ್ಲಿರುವ ಸೈಬರ್ ಠಾಣೆಗಳ ಮೇಲುಸ್ತುವಾರಿಗಾಗಿ ಡಿಜಿಪಿ, ಸೈಬರ್ ಮತ್ತು ನಾರ್ಕೋಟಿಕ್ಸ್ ಹುದ್ದೆಯನ್ನು ಸೃಜಿಸಲಾಗಿದೆ.

ಸೈಬರ್ ವಂಚನೆ ಪ್ರಕರಣಗಳನ್ನು ತ್ವರಿತಗತಿಯಲ್ಲಿ ತನಿಖೆ ಮಾಡಿ

</td></tr>
</table>

ಸಾರ್ವಜನಿಕರಿಗೆ ಅಕ್ರಮ ನಷ್ಟ ತಪ್ಪಿಸುವ ಸಲುವಾಗಿ ರಾಜ್ಯದಲ್ಲಿ ಹೊಸದಾಗಿ 43 ಸೆನ್ ಪೊಲೀಸ್ ಠಾಣೆಗಳನ್ನು ಸೃಜಿಸಲಾಗಿದ್ದು, ಗುಣಮಟ್ಟದ ತನಿಖೆಯ ಸಲುವಾಗಿ ಡಿವೈಎಸ್‌ಪಿ/ಎಸಿಪಿ ದರ್ಜೆಯ ಅಧಿಕಾರಿಗಳನ್ನು ಎಸ್.ಹೆಚ್.ಓ ಗಳನ್ನಾಗಿ ಮಾಡಲಾಗಿದೆ.

ಸಿಐಡಿ ಕಛೇರಿಯ ಸಿ.ಎಫ್.ಯು ವಿಭಾಗದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಪ್ರಕರಣಗಳಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗುತ್ತಿದ್ದು, ಸದರಿ ಸಿ.ಎಫ್.ಯು ವಿಭಾಗದಲ್ಲಿ Magnet AXIOM, Belkasoft evidence center X, Cellbrite Digital Collector (Mac Forensic), Cellbrite Inspector (Mac Forensic), Oxygen forensic detective, UFED4PC, Hunchly, Merkle science, Pasware kit Forensic ಮುಂತಾದ ಸಾಫ್ಟ್ ವೇರ್‌ಗಳನ್ನು ತಾಂತ್ರಿಕ ವಿಶ್ಲೇಷಣೆಗಾಗಿ ಸೈಬರ್ ಕ್ರೈಂ ಪ್ರಕರಣಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

ಸಿಐಡಿ ಘಟಕದ ಸಿಎಫ್‌ಯು ವಿಭಾಗದಲ್ಲಿ 2024ನೇ ಸಾಲಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಸಾಫ್ಟ್‌ವೇರ್‌ಗಳನ್ನು ಬಳಸಿಕೊಂಡು ಕರ್ನಾಟಕ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳ 257 ಪ್ರಕರಣಗಳಲ್ಲಿ ಒಟ್ಟು 1367 ತಾಂತ್ರಿಕ ವಿದ್ಯುನ್ಮಾನ ಸಾಧನಗಳನ್ನು ವಿಶ್ಲೇಷಣೆಗೆ ಒಳಪಡಿಸಿ, ಪ್ರಕರಣಗಳಲ್ಲಿ ತಾಂತ್ರಿಕ ಸಹಾಯವನ್ನು ಒದಗಿಸಲಾಗಿರುತ್ತದೆ.

ಸಿಐಡಿ ಕಛೇರಿಯ Centre for Cybercrime Investigation Training & Research (CCITR) ವಿಭಾಗದಲ್ಲಿ 2019ನೇ ಸಾಲಿನಿಂದ ಸರ್ಕಾರಿ ಸಂಸ್ಥೆಗಳಿಗೆ, ನ್ಯಾಯಾಧೀಶರುಗಳಿಗೆ, ಕಾನೂನು ಅಭಿಯೋಜಕರಿಗೆ, ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳನ್ನು ತನಿಖೆ ಮತ್ತು ಪತ್ತೆ ಮಾಡುವ ಬಗ್ಗೆ ಹಲವಾರು ತರಬೇತಿಗಳನ್ನು ನೀಡಲಾಗುತ್ತಿರುತ್ತದೆ. ಪ್ರಸಕ್ತ 2024ನೇ ಸಾಲಿನಲ್ಲಿ ಸಿಐಡಿ ಕಛೇರಿಯ ಸಿ.ಸಿ.ಐ.ಟಿ.ಆರ್ ಘಟಕದಲ್ಲಿ ಕೈಗೊಂಡ ತರಬೇತಿ ವಿವರಗಳನ್ನು ಈ ಕೆಳಕಂಡಂತೆ ಒದಗಿಸಲಾಗಿದೆ;

| ಕ್ರ ಸಂ. | ತರಬೇತಿಯ ವಿವರ | ತರಬೇತಿ ಪಡೆದವರ ಸಂಖ್ಯೆ |
|---|---|---|
| 1. | ಮಾನ್ಯ ನ್ಯಾಯಾಧೀಶರುಗಳಿಗೆ ಸೈಬರ್ ಅಪರಾಧ ತರಬೇತಿ | 176 |
| 2. | ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರುಗಳಿಗೆ ಸೈಬರ್ ಅಪರಾಧಗಳ ಲೆವಲ್-1 & ಲೆವಲ್-2 ತರಬೇತಿ | 984 |
| 3. | ಕರ್ನಾಟಕ ರಾಜ್ಯದ ಪೊಲೀಸ್ ಅಧಿಕಾರಿ/ ಸಿಬ್ಬಂದಿಯವರುಗಳಿಗೆ ಆನ್‌ಲೈನ್ ತರಬೇತಿ | 3799 |

ಸೈಬರ್ ವಂಚನೆಯ ಪ್ರಕರಣಗಳ ಬಗ್ಗೆ ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ವಾಟ್ಸ್‌ಆಪ್ ಹಾಗೂ ಟ್ವೀಟರ್‌ಗಳ ಮೂಲಕ ಸೈಬರ್ ಜಾಗೃತಿಯ ಬಗ್ಗೆ ಕಿರುಚಿತ್ರ ಹಾಗೂ ಸಂದೇಶಗಳನ್ನು ರವಾನಿಸುವ ಮೂಲಕ ಸಾರ್ವಜನಿಕರಿಗೆ ಜಾಗೃತಿ ನೀಡಲಾಗುತ್ತಿದೆ. ಶಾಲಾ ಕಾಲೇಜುಗಳಿಗೆ, ಇತರೆ ಸಂಸ್ಥೆಗಳಿಗೆ ಭೇಟಿ ನೀಡಿ ವಿದ್ಯಾರ್ಥಿ ಹಾಗೂ ಸಾರ್ವಜನಿಕರುಗಳಿಗೆ ಸೈಬರ್ ವಂಚನೆಯ ಬಗ್ಗೆ ಜಾಗೃತಿ ಮೂಡಿಸಲು ಜಾಗೃತಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

| | | |
|---|---|---|
| | | ಸೈಬರ್ ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ಹಾಗೂ ಸಾರ್ವಜನಿಕರ ಭದ್ರತೆ ಕಾಪಾಡುವ ನಿಟ್ಟಿನಲ್ಲಿ ನಿರಂತರವಾಗಿ ಆರ್‌ಬಿ.ಐ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳು, ಇಂಟರ್‌ಮೀಡಿಯರಿಗಳು ಮತ್ತು ಇತರೆ ಕಾನೂನು ಜಾರಿ ಸಂಸ್ಥೆಗಳೊಂದಿಗೆ ಸಭೆಗಳನ್ನು ನಡೆಸಿ, ಸೈಬರ್ ಅಪರಾಧಗಳನ್ನು ತಡೆಗಟ್ಟಲು ಹಲವು ಪರಿಣಾಮಕಾರಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಸಾರ್ವಜನಿಕರ ಹಿತ ಕಾಪಾಡುವಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸೈಬರ್ ಅಪರಾಧಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇತರೆ ಪೊಲೀಸ್ ಠಾಣೆಗಳಲ್ಲಿ ಸಹ ದೂರನ್ನು ದಾಖಲಿಸಬಹುದಾಗಿದೆ. ಅಲ್ಲದೆ, ಸೈಬರ್ ಕ್ರೈಂನಿಂದ ವಂಚಿತರಾದವರು ದೂರನ್ನು ನೀಡಲು ಉಚಿತ ಸಹಾಯವಾಣಿ 1930 ಸೇವೆಯನ್ನು ಪ್ರಾರಂಭಿಸಲಾಗಿರುತ್ತದೆ ಮತ್ತು ಸಾರ್ವಜನಿಕರು Cyber ಪೋರ್ಟಲ್ ಮೂಲಕ ಸಹ ದೂರನ್ನು ದಾಖಲಿಸಬಹುದಾಗಿದೆ.<br><br>ಪ್ರಸ್ತುತ ಐಟಿ ಕಾಯ್ದೆ-2000 ಅಡಿಯಲ್ಲಿ ಇನ್ಸ್‌ಪೆಕ್ಟರ್ ಮತ್ತು ಮೇಲ್ಪಟ್ಟ ದರ್ಜೆಯ ಅಧಿಕಾರಿಗಳು ಸೈಬರ್ ಅಪರಾಧಗಳನ್ನು ತನಿಖೆ ಮಾಡುವ ಅಧಿಕಾರವನ್ನು ಹೊಂದಿದ್ದು, ಸೈಬರ್ ಅಪರಾಧಗಳನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಸೈಬರ್ ಅಪರಾಧಗಳನ್ನು ತನಿಖೆ ಮಾಡುವ ಅಧಿಕಾರವನ್ನು ಪಿಎಸ್‌ಐ ರವರಿಗೂ ಸಹ ನೀಡುವ ಕುರಿತು ಕ್ರಮ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುತ್ತಿದೆ. |
| ಉ) | ಕರ್ನಾಟಕ ರಾಜ್ಯವನ್ನು ಸುರಕ್ಷಿತ ರಾಜ್ಯವನ್ನಾಗಿಸಲು ಇಲಾಖೆಯ ರೂಪಿಸಿಕೊಂಡಿರುವ ಯೋಜನೆಗಳು ಯಾವುವು; ಮತ್ತು ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಆಧುನೀಕರಣವನ್ನು ತರಲು ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳು ಯಾವುವು? | ಕರ್ನಾಟಕ ರಾಜ್ಯವನ್ನು ಸುರಕ್ಷಿತ ರಾಜ್ಯವನ್ನಾಗಿಸಲು ಇಲಾಖೆಯು ರೂಪಿಸಿಕೊಂಡಿರುವ ಯೋಜನೆಗಳು ಈ ಕೆಳಕಂಡಂತಿವೆ:-<br><br>• ಬೆಂಗಳೂರು ನಗರದಲ್ಲಿ ಕೇಂದ್ರ ಸರ್ಕಾರದ ನಿರ್ಭಯ ನಿಧಿ ಅಡಿಯಲ್ಲಿ ಬೆಂಗಳೂರು ನಗರದ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಸುರಕ್ಷತೆಗೆ, ಪೊಲೀಸ್ ಆಯುಕ್ತರು ಬೆಂಗಳೂರು ನಗರ ಘಟಕದಿಂದ ಸೇಫ್ ಸಿಟಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಬೆಂಗಳೂರು ನಗರಾದ್ಯಂತ ಒಟ್ಟು 7500 ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಮುಂದುವರೆದು, ಹೆಚ್ಚುವರಿಯಾಗಿ 1736 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ.<br>• ಕಮಾಂಡ್ ಸೆಂಟರ್ - ಬೆಂಗಳೂರು ನಗರದಾದ್ಯಂತ 300 ಸ್ಥಳಗಳಲ್ಲಿ ಅಳವಡಿಸಿರುವ ಒಟ್ಟು 7500 ಕ್ಯಾಮೆರಾಗಳ ದೃಶ್ಯಾವಳಿಗಳನ್ನು ವೀಕ್ಷಿಸುವ ಸೌಲಭ್ಯ ಕಲ್ಪಿಸಲಾಗಿದೆ.<br>• ಜನನಿಬಿಡ ಪ್ರದೇಶ ಹಾಗೂ ಬಂದೋಬಸ್ತ್ ಸ್ಥಳಗಳನ್ನು ನಿಗಾ ಇಡಲು ಒಂದು ಅತ್ಯಾಧುನಿಕ ಮೊಬೈಲ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ವಾಹನವನ್ನು ಬಳಸಲಾಗುತ್ತಿದೆ.<br>• ಬೆಂಗಳೂರು ನಗರದ ಎಲ್ಲಾ ಕಾ&ಸು ಡಿಸಿಪಿ ರವರುಗಳ ಕಛೇರಿ ಮತ್ತು 111 ಪೊಲೀಸ್ ಠಾಣೆಗಳಿಗೆ ಕ್ಯಾಮೆರಾಗಳ ದೃಶ್ಯಾವಳಿಗಳ ನೇರ ವೀಕ್ಷಣೆಗೆ ಸೌಲಭ್ಯ ಕಲ್ಪಿಸಲಾಗಿದೆ.<br>• ಬೆಂಗಳೂರು ನಗರದಾದ್ಯಂತ ಆಯ್ದ 50 ಸ್ಥಳಗಳಲ್ಲಿ ಸೇಫ್ಟಿ ಐಲ್ಯಾಂಡ್‌ಗಳನ್ನು ಸ್ಥಾಪಿಸಲಾಗಿದೆ.<br>• ಬೆಂಗಳೂರು ನಗರದಾದ್ಯಂತ ಸಾಮಾನ್ಯ ಕಾನೂನು ಸುವ್ಯವಸ್ಥೆ ಮೇಲೆ ನಿಗಾಯಿಡಲು 10 ಡ್ರೋನ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ.<br>• 560 ಬಾಡಿವೋರ್ನ್ ಕ್ಯಾಮೆರಾಗಳನ್ನು ಖರೀದಿಸಲಾಗಿದೆ. |

- ನಿರ್ಭಯ ಕೇಂದ್ರ (Integrated Support Centre for Women & Children) ಇಲ್ಲಿ ಶೋಷಣೆಗೊಳಗಾದ ಮಹಿಳೆ ಮತ್ತು ಮಕ್ಕಳಿಗೆ ಒಂದೇ ಸೂರಿನಡಿಯಲ್ಲಿ ವೈದ್ಯಕೀಯ ಚಿಕಿತ್ಸೆ, ಆಪ್ತ ಸಮಾಲೋಚನೆ, ಕಾನೂನು ನೆರವು, ವಿಡಿಯೋ ಕಾನ್‌ಫರೆನ್ಸ್ ಮೂಲಕ ಕಲಂ.164 ಸಿಆರ್‌ಪಿಸಿ ಅಡಿಯಲ್ಲಿ ಮಾನ್ಯ ನ್ಯಾಯಾಧೀಶರ ಮುಂದೆ ನೀಡುವ ಹೇಳಿಕೆಯನ್ನು ರೆಕಾರ್ಡ್ ಮಾಡುವ ಸೇವೆ, ಇತ್ಯಾದಿ ಸೇವೆಗಳನ್ನು ಒದಗಿಸಲಾಗುತ್ತಿದೆ.
- ಶೋಷಣೆಗೊಳಗಾದ ಮಹಿಳೆಯರಿಗೆ ಆಪ್ತ ಸಮಾಲೋಚನೆಯೊಂದಿಗೆ ಪ್ರಥಮ ವೈದ್ಯಕೀಯ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ನಗರದ 08 ಪ್ರಮುಖ ಸರ್ಕಾರಿ ಆಸ್ಪತ್ರೆಗಳಾದ ಬೌರಿಂಗ್, ವಾಣಿವಿಲಾಸ, ವಿಕ್ಟೋರಿಯಾ, ಕೆ.ಸಿ ಜನರಲ್, ಸಿ.ವಿ. ರಾಮನ್ ಜನರಲ್, ಜಯನಗರ ಜನರಲ್, ಇಎಸ್‌ಐ ರಾಜಾಜಿನಗರ ಹಾಗೂ ಯಲಹಂಕ ಜನರಲ್ ಆಸ್ಪತ್ರೆಗಳಲ್ಲಿ ಸಿ.ಸಿ.ಆರ್.ಯು (Critical Care Response Unit) ತೆರೆಯಲಾಗಿದೆ.
- ಅಪರಾಧ ಕೃತ್ಯ ನಡೆದ ಸ್ಥಳಗಳಿಗೆ ಫೊರೆನ್ಸಿಕ್ ವಾಹನಗಳು ತಜ್ಞರೊಂದಿಗೆ ಕೊಡಲೇ ತಲುಪಿ, ಸಾಕ್ಷ್ಯ ಸಂಗ್ರಹಣೆ ಮಾಡಿ, ತಜ್ಞರ ಅಭಿಪ್ರಾಯ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ತಲುಪಿಸಲು ಅನುಕೂಲವಾಗುವಂತೆ 08 ಫೊರೆನ್ಸಿಕ್ ವಾಹನಗಳನ್ನು ಖರೀದಿಸಲಾಗಿರುತ್ತದೆ.
- ನಗರದ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ ರಾಣಿ ಚನ್ನಮ್ಮ ಪಡೆಯನ್ನು ರಚಿಸಲಾಗಿದ್ದು, ಸದರಿ ಪಡೆಯಲ್ಲಿನ ಮಹಿಳಾ ಪೊಲೀಸ್ ಸಿಬ್ಬಂದಿಗಳಿಗೆ "**ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ**" ವತಿಯಿಂದ ಸ್ವರಕ್ಷಣಾ ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿ ಪಡೆದ ಮಹಿಳಾ ಪೊಲೀಸ್ ಸಿಬ್ಬಂದಿಗಳು ನಗರದ ಶಾಲೆ ಮತ್ತು ಕಾಲೇಜುಗಳಲ್ಲಿನ ವಿದ್ಯಾರ್ಥಿನಿಯರಿಗೆ ಸ್ವರಕ್ಷಣಾ ತರಬೇತಿ ನೀಡುವ ಜೊತೆಗೆ ಠಾಣಾ ವ್ಯಾಪ್ತಿಯಲ್ಲಿ ಮಹಿಳೆಯರ ತೊಂದರೆಗಳಿಗೆ ಸ್ಪಂದಿಸುತ್ತಿರುತ್ತಾರೆ.
- NLSIU, NIMHANS ಸಂಸ್ಥೆಯ ವತಿಯಿಂದ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳಿಗೆ, ಸಾರ್ವಜನಿಕರಿಗೆ, ಶಾಲಾ ಮತ್ತು ಕಾಲೇಜು ಮಕ್ಕಳಿಗೆ, ಕಾರಾಗೃಹದಲ್ಲಿರುವ ಖೈದಿಗಳಿಗೆ ಹಾಗೂ ಕಾನೂನಿನೊಂದಿಗೆ ಸಂಘರ್ಷದಲ್ಲಿರುವ ಮಕ್ಕಳಿಗೆ, ಲಿಂಗ ಸಂವೇದನೆ, ಲಿಂಗಾಧಾರಿತ ಹಿಂಸಾಚಾರದ ಕುರಿತು ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. MC&A ಸಂಸ್ಥೆಯ ವತಿಯಿಂದ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಜಾಹಿರಾತು ನೀಡುವ ಮೂಲಕ ಕ್ರಮ ಕೈಗೊಳ್ಳಲಾಗುತ್ತಿದೆ.
- ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗಳಿಗೆ ಭೇಟಿ ನೀಡುವುದು ಕಷ್ಟಕರವಾಗಿರುವುದರಿಂದ ಪೊಲೀಸ್ ಠಾಣೆ ಹೊರ ಭಾಗದಲ್ಲಿ ದೂರು ಪೆಟ್ಟಿಗೆಗಳನ್ನು (BoX it) ಅಳವಡಿಸಿ, ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಅನಾಮಧೇಯ ದೂರುಗಳನ್ನು ಸ್ವೀಕರಿಸಲು ವ್ಯವಸ್ಥೆ ಕಲ್ಪಿಸಲಾಗಿದೆ.
- ನಗರದಾದ್ಯಂತ ಒಟ್ಟು 60 ಮಹಿಳಾ ಔಟ್ ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ದಿನದ 24 ಗಂಟೆ ಕಾರ್ಯವನಿರ್ವಹಿಸಲು ಪಾಳೆಯ ವ್ಯವಸ್ಥೆಯಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಶಾಲೆ ಕಾಲೇಜು, ಬಸ್‌ಸ್ಟಾಂಡ್, ರೈಲ್ವೆ ನಿಲ್ದಾಣ, ಪಾರ್ಕ್, ಮಾಲ್ ಇತ್ಯಾದಿ ಸೂಕ್ಷ್ಮ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಕಾಣುವ

ರೀತಿಯಲ್ಲಿ ಸದರಿ ಔಟ್‌ಪೋಸ್ಟ್‌ಗಳನ್ನು ಅಳವಡಿಸುವ ಮೂಲಕ ಸಾರ್ವಜನಿಕವಾಗಿ ಮಹಿಳೆಯರಿಗೆ ಭದ್ರತೆ ಒದಗಿಸುವ ವಿಶ್ವಾಸವನ್ನು ಮೂಡಿಸುವ ಜೊತೆಗೆ ದೌರ್ಜನ್ಯಕ್ಕೊಳಗಾದ ಮಹಿಳೆ/ಮಕ್ಕಳಿಗೆ ಕೂಡಲೇ ಪೊಲೀಸ್ ನೆರವನ್ನು ಒದಗಿಸುವ ಉದ್ದೇಶವನ್ನು ಗುರಿಯಾಗಿಟ್ಟುಕೊಳ್ಳಲಾಗಿದೆ.

- ಕ್ರೈಸ್ಟ್ ಯೂನಿವರ್ಸಿಟಿ ರವರಿಂದ ಸೇಫ್ ಸಿಟಿ ಯೋಜನೆಯ ಅನುಷ್ಠಾನದ ಕುರಿತು Impact Assessment ವರದಿಯನ್ನು ಮಾಡಿಸಲಾಗುತ್ತಿದೆ.
- ಸೇಫ್ ಸಿಟಿ ಯೋಜನೆಯಡಿಯಲ್ಲಿ ರಚಿಸಲಾಗಿರುವ ರಾಣಿ ಚನ್ನಮ್ಮ ಪಡೆಯ ಕಾರ್ಯ ನಿರ್ವಹಣೆಗೆ 448 ಸಂಖ್ಯೆಯ ದ್ವಿಚಕ್ರ ವಾಹನ ಮತ್ತು 224 ಸಂಖ್ಯೆಯ ನಾಲ್ಕು ಚಕ್ರವಾಹನ, 224 ಸಂಖ್ಯೆಯ ಕಂಪ್ಯೂಟರ್ ಮತ್ತು 112 ಸಂಖ್ಯೆಯ ಪ್ರಿಂಟರ್‌ಗಳನ್ನು ಹಾಗೂ ಪೀಠೋಪಕರಣಗಳನ್ನು ಖರೀದಿಸಿ ಒದಗಿಸಲಾಗಿದೆ.
- ಬೆಂಗಳೂರು ನಗರ ಪೊಲೀಸ್ ಆಯುಕ್ತರ ಘಟಕದಲ್ಲಿನ 08 ಸಂಖ್ಯೆಯ ಸೈಬರ್ ಕ್ರೈಂ (CEN) ಠಾಣೆಗಳನ್ನು ಆಧುನಿಕ ಸೈಬರ್ ತಂತ್ರಜ್ಞಾನಗಳೊಂದಿಗೆ ಮತ್ತಷ್ಟು ಬಲಪಡಿಸಲು ಹಾಗೂ ಮಹಿಳೆಯರ ವಿರುದ್ಧ ಎಸಗುವ ಸೈಬರ್ ಅಪರಾಧಗಳನ್ನು ತ್ವರಿತವಾಗಿ ಪತ್ತೆಹಚ್ಚಲು ಸಹಾಯವಾಗುವಂತೆ ವಿವಿಧ ಬಗೆಯ ಅತ್ಯಾಧುನಿಕ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳನ್ನು ಖರೀದಿಸಿ ಒದಗಿಸಲಾಗಿದೆ.
- ನಗರದ 200 ಸಂಖ್ಯೆಯ ಹೊಯ್ಸಳ ವಾಹನಗಳಿಗೆ ಡ್ಯಾಷ್ ಕ್ಯಾಮ್ ಗಳನ್ನು ಅಳವಡಿಸಲಾಗಿದೆ.
- ಪ್ರಸ್ತುತ ಕರ್ನಾಟಕ ರಾಜ್ಯ ಪೊಲೀಸ್ App ಅನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಮಹಿಳೆಯರ ಸುರಕ್ಷತೆಗೆ ಸಹಾಯಕವಾಗುವಂತಹ ಹೆಚ್ಚುವರಿ ವೈಶಿಷ್ಟ್ಯಗಳನ್ನು ಅಭಿವೃದ್ಧಿಪಡಿಸಲಾಗಿದೆ.
- ಸಂಘಟಿತ ಅಪರಾಧಗಳನ್ನು ತಡೆಯುವ ನಿಟ್ಟಿನಲ್ಲಿ ಗಡಿಪಾರು (Externment), ಗೂಂಡಾ ಕಾಯ್ದೆಯಡಿ ಕ್ರಮ ಜರುಗಿಸಲಾಗುತ್ತಿದೆ.
- ಕಾಲಕಾಲಕ್ಕೆ ಅಪರಾಧ ತಡೆ ಮಾಸಾಚರಣೆಗಳನ್ನು ಆಚರಿಸುವ ಮೂಲಕ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ನಿಗಾವಹಿಸಲು ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಸಾಮಾಜಿಕ ಜಾಲತಾಣ ಮೇಲ್ವಿಚಾರಣಾ ಕೋಶವನ್ನು ತೆರೆಯಲಾಗಿದ್ದು, ಈ ಕೋಶದ ಮುಖೇನ ಸತತ ನಿಗಾ ಇಡಲಾಗುತ್ತಿದೆ.
- ಠಾಣಾ ವ್ಯಾಪ್ತಿಯಲ್ಲಿ ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ.
- ಅಂತರ್‌ರಾಜ್ಯ ಸಂಪರ್ಕಿಸುವ ಗಡಿಯಲ್ಲಿ ಚೆಕ್ ಪೋಸ್ಟ್ ಗಳನ್ನು ಪ್ರಾರಂಭಿಸಿದ್ದು, ಎಲ್ಲಾ ವಾಹನ, ಸಂಶಯಿತ ವ್ಯಕ್ತಿಗಳನ್ನು ತಪಾಸಣೆ ನಡೆಸಲಾಗುತ್ತಿದೆ.
- ಸರಹದ್ದಿನಲ್ಲಿ ನಡೆಯುವ ಎಲ್ಲಾ ಬಂದೋಬಸ್ತುಗಳಿಗೆ ಗರಿಷ್ಠ ಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನಿಯೋಜಿಸಿ ಬಂದೋಬಸ್ತು ಕರ್ತವ್ಯವನ್ನು ಮಾಡಲಾಗುತ್ತಿದೆ.
- ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲಾ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ

ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.

- ಸುಧಾರಿತ ಗಸ್ತು ಪದ್ಧತಿಯನ್ನು ಜಾರಿಗೊಳಿಸಿ ಗಸ್ತು ಸಿಬ್ಬಂದಿಗಳು ಗುಪ್ತ ಮಾಹಿತಿಯನ್ನು ಕಲೆ ಹಾಕುವ ಮೂಲಕ ಅಪರಾಧ ಪ್ರಕರಣಗಳನ್ನು ನಿಯಂತ್ರಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.
- ಹಗಲು ಮತ್ತು ರಾತ್ರಿ ಗ್ರಾಮ ಗಸ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ.
- ಕೋಮು ಗಲಭೆ ಹಿನ್ನಲೆಯುಳ್ಳ ವ್ಯಕ್ತಿಗಳ ಚಲನವಲನಗಳನ್ನು ಪ್ರತಿನಿತ್ಯ ಗಮನಿಸಲಾಗುತ್ತಿದೆ.
- ಠಾಣಾ ವ್ಯಾಪ್ತಿಯಲ್ಲಿನ ಕೋಮು ಹಿನ್ನಲೆಯುಳ್ಳ ಮತ್ತು ರೌಡಿ ವ್ಯಕ್ತಿಗಳಿಗೆ ಭದ್ರತಾ ಕಾಯ್ದೆಯಡಿ ಪ್ರಕರಣಗಳನ್ನು ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ರೂಢಿಗತ ಅಪರಾಧಿಗಳು, ರೌಡಿಗಳು ಹಾಗೂ ಮತೀಯ ಗೂಂಡಾಗಳ ಚಟುವಟಿಕೆಯ ಮೇಲೆ ಸೂಕ್ತ ನಿಗಾ ಇರಿಸಲಾಗುತ್ತಿದ್ದು, ಸಕ್ರೀಯವಾಗಿರುವ ಎಂ.ಒ.ಬಿ, ರೌಡಿ ಆಸಾಮಿ ಹಾಗೂ ಮತೀಯ ಗೂಂಡಾಗಳ ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ.126, 129 ಅನ್ವಯ ಸಂಬಂಧಪಟ್ಟ ತಾಲೂಕು ದಂಡಾಧಿಕಾರಿಗಳಿಗೆ ಮುಂಜಾಗ್ರತಾ ಕ್ರಮದ ವರದಿಯನ್ನು ನೀಡಿ ಸನ್ನಡತೆಗಾಗಿ ಮುಚ್ಚಳಿಕೆಯನ್ನು ಪಡೆಯಲಾಗುತ್ತಿದೆ.
- ದೈಹಿಕ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳಲ್ಲಿ ಭಾಗಿಯಾದ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳು ಪುನ: ದೈಹಿಕ ಹಲ್ಲೆ ಪ್ರಕರಣದಲ್ಲಿ ಭಾಗಿಯಾದರೆ ಸದ್ರಿ ಆರೋಪಿಗಳು ಈಗಾಗಲೇ ನ್ಯಾಯಾಲಯದಿಂದ ಪಡೆದಿರುವ ಜಾಮೀನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಜೊತೆಗೆ ಕರ್ನಾಟಕ ಪೊಲೀಸ್ ಕಾಯ್ದೆಯನ್ವಯ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ರೌಡಿ ಆಸಾಮಿಗಳು ಮತ್ತು ಮತಿಯ ಗೂಂಡಾಗಳು ಅಪರಾಧಿಕ ಪ್ರಕರಣಗಳಲ್ಲಿ ಭಾಗಿಯಾಗಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಮುಂದುವರಿದಿದ್ದಲ್ಲಿ ಅವರನ್ನು ನಿಯಂತ್ರಣದಲ್ಲಿಡಲು ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದ ಪೊಲೀಸ್ ಇಲಾಖೆಯಲ್ಲಿ ಆಧುನೀಕರಣವನ್ನು ತರಲು ಇಲಾಖೆ ವತಿಯಿಂದ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ :-

- ಜಿಲ್ಲಾ ಮತ್ತು ಠಾಣಾ ಮಟ್ಟದಲ್ಲಿ "ಸಾಮಾಜಿಕ ಜಾಲತಾಣ ನಿಗಾವಣಾ ಘಟಕ" (SMMC Social Media Monitoring Cell) ಸ್ಥಾಪಿಸಲಾಗಿದ್ದು, ಪಿ.ಐ ಸಿ.ಇ.ಎನ್ ಪೊಲೀಸ್ ಠಾಣೆ ರವರನ್ನು ನೋಡಲ್ ಅಧಿಕಾರಿಯಾಗಿ ನೇಮಕ ಮಾಡಿ, ಪ್ರತಿ ದಿನ ಸಾಮಾಜಿಕ ಜಾಲ ತಾಣಗಳ ಮೇಲೆ ನಿಗಾ ವಹಿಸಲಾಗುತ್ತಿದ್ದು ಕಾನೂನು ಬಾಹಿರ ಚಟುವಟಿಕೆಗಳ ಪೋಸ್ಟರ್‌ಗಳು ಕಂಡುಬಂದಲ್ಲಿ ಕೂಡಲೇ ಸಂಬಂಧಪಟ್ಟವರ ವಿರುದ್ಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
- ರಸ್ತೆ ಅಪಘಾತಗಳ ಮಾಹಿತಿಯನ್ನು ಪೊಲೀಸ್ ಐ.ಟಿ. ತಂತ್ರಾಂಶದ ಜೊತೆಗೆ IRAD (Integrated Road Accident Database) ಅಪ್ಲಿಕೇಶನ್‌ದಲ್ಲಿ ಅಪಡೇಟ್ ಮಾಡಲಾಗುತ್ತಿದೆ.
- ಸೈಬರ್ ಅಪರಾಧಕ್ಕೆ ಒಳಗಾದ ಸಾರ್ವಜನಿಕರಿಗೆ ತುರ್ತಾಗಿ

ಸ್ಪಂದಿಸಲು 1930 ಸಹಾಯವಾಣಿ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, NCCRP (National Cyber Crime reporting Portal) ಮುಖಾಂತರವೂ ಸಹ ಸಾರ್ವಜನಿಕರು ತಮ್ಮ ದೂರನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

- M.C.C.T.N.S ಮೂಲಕ ಅನುಮಾನಾಸ್ಪದ ವ್ಯಕ್ತಿಗಳನ್ನು, ವಾಹನಗಳನ್ನು ಚೆಕ್ ಮಾಡಲಾಗುತ್ತಿರುತ್ತದೆ.
- ಪ್ರಕರಣಗಳ ಕುರಿತು (ನ್ಯಾಯಾಲಯ ಮತ್ತು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ) ಮಾಹಿತಿಗಾಗಿ Police IT ತಂತ್ರಾಂಶ ಬಳಕೆ ಮಾಡಲಾಗುತ್ತಿರುತ್ತದೆ.
- ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ದೇಶದಾದ್ಯಂತ ದಾಖಲಾಗಿರುವ ಪ್ರಕರಣಗಳ ಬಗ್ಗೆ ಮಾಹಿತಿ ಪಡೆಯಲು I.C.J.S ಪೋರ್ಟಲ್ ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲಾಗಿರುತ್ತದೆ.
- ದಾಖಲಾತಿಗಳು ಕಳೆದುಹೋಗಿರುವ ಬಗ್ಗೆ ದೂರು ನೀಡಲು ಇ-Lost Application ಅನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲಾಗಿರುತ್ತದೆ.
- ಸಕಾಲ ಅರ್ಜಿಗಳ ತ್ವರಿತ ಪರಿಶೀಲನೆ ಮತ್ತು ವಿಲೇವಾರಿ ಸಂಬಂಧ M-Passport Application ಅನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲಾಗಿರುತ್ತದೆ.
- ಕಳೆದು ಹೋಗಿರುವ ಮೊಬೈಲ್‌ಗಳ ಪತ್ತೆಗಾಗಿ CEIR ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಿ ಅಳವಡಿಸಿಕೊಳ್ಳಲಾಗಿರುತ್ತದೆ.
- ಪ್ರಕರಣಗಳಲ್ಲಿ ಭಾಗಿಯಾಗಿರುವ ಆರೋಪಿತರುಗಳ ಬೆರಳು ಮುದ್ರೆಗಳನ್ನು ಸಂಗ್ರಹಿಸಲು ಲೈವ್ ಸ್ಕ್ಯಾನರ್‌ಗಳನ್ನು ಬಳಕೆ ಮಾಡಲಾಗುತ್ತಿರುತ್ತದೆ.
- ಪೊಲೀಸ್ ಇಲಾಖೆಯ ಕಾರ್ಯವೈಖರಿಯ ಬಗ್ಗೆ ಸಾರ್ವಜನಿಕರಿಂದ ಫೀಡ್ ಬ್ಯಾಕ್ ಪಡೆಯುವ ಸಲುವಾಗಿ ಲೋಕಸ್ಪಂದನ ಆಪ್ ಅನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.
- ಅಪಘಾತ ಪ್ರಕರಣಗಳ ಡಾಟಾವನ್ನು ಸಂಗ್ರಹಿಸಲು e-DAR ಆಪ್ ಅನ್ನು ಅಳವಡಿಸಿಕೊಳ್ಳಲಾಗಿದೆ.
- ಮಾನ್ಯ ಉಚ್ಚ ನ್ಯಾಯಾಲಯದ ಮೇಲ್ಮನವಿ/ನ್ಯಾಯಾಂಗ ನಿಂದನೆ ಮತ್ತು ಇತರೆ ಪ್ರಕರಣಗಳ ಹಂತದ ಬಗ್ಗೆ ತಿಳಿಯುವ ಸಲುವಾಗಿ ವೆಬ್‌ಸೈಟ್ ಅನ್ನು ಅಳವಡಿಸಿಕೊಳ್ಳಲಾಗಿರುತ್ತದೆ.
- ಅಪಘಾತ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ A.N.P.R ಕ್ಯಾಮೆರಾಗಳನ್ನು ಅಳವಡಿಸಲಾಗಿರುತ್ತದೆ.
- Highway mobile & Hoysala ವಾಹನಗಳಿಗೆ Body worn camera ಗಳನ್ನು ಮತ್ತು Dash board camera ಗಳನ್ನು ಅಳವಡಿಸಲಾಗಿರುತ್ತದೆ.
- ಸಿ.ಇ.ಎನ್ ಪೊಲೀಸ್ ಠಾಣೆಗೆ ಮೊಬೈಲ್ ಡಾಟಾಗಳ ರಿಟ್ರೀವ್ ಮತ್ತು ಇತರೆ ಮಾಹಿತಿಗಳನ್ನು ಸಂಗ್ರಹಿಸುವ ಸಲುವಾಗಿ ಅತ್ಯಾಧುನಿಕ ಉಪಕರಣಗಳಾದ MH-Ant analyzer, Faraday bag ಗಳನ್ನು ನೀಡಲಾಗಿರುತ್ತದೆ.
- ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ರಾತ್ರಿ ಮತ್ತು ಹಗಲು ಗಸ್ತು ನಿರ್ವಹಿಸಲು ಮತ್ತು ಮೇಲ್ವಿಚಾರಣೆ ಮಾಡಲು ಅನುಕೂಲವಾಗುವಂತೆ ಸ್ಮಾರ್ಟ್ ಇ-ಬೀಟ್ ಮೊಬೈಲ್ ಅಪ್ಲಿಕೇಶನ್ ಅಭಿವೃದ್ಧಿ ಪಡಿಸಿ, ಅನುಷ್ಠಾನಗೊಳಿಸಲಾಗಿರುತ್ತದೆ. ಇದರೊಂದಿಗೆ ಬ್ಯಾಡ್ ಕ್ಯಾರೆಕ್ಟರ್ ಮತ್ತು ಸಂಶಯಾಸ್ಪದ ಜನರ ಪರಿಶೀಲನೆ ಕೂಡಾ ನಡೆಸಬಹುದಾಗಿದೆ.
- ಲೋಕಸ್ಪಂದನ ಪ್ರತಿಕ್ರಿಯೆ ವ್ಯವಸ್ಥೆ: ಪ್ರತಿ ನಿತ್ಯ ಪೊಲೀಸ್ ಠಾಣೆಗಳಿಗೆ ಭೇಟಿ ನೀಡುವ ಸಾರ್ವಜನಿಕರು ಹಾಗೂ ಫಿರ್ಯಾದುದಾರರು ಪೋಲೀಸು ಸೇವೆಗಳ ವಿಚಾರದಲ್ಲಿ ತಮ್ಮ ಅನುಭವಗಳನ್ನು (ಫೀಡ್ ಬ್ಯಾಕ್) ಹಂಚಿಕೊಳ್ಳಲು ಈ

| | | |
|---|---|---|
| | | ಅಪ್ಲಿಕೇಶನ್ ಅನ್ನು ಬಳಸಲಾಗುತ್ತಿದೆ.<br>• KSP ಮೊಬೈಲ್ ಅಪ್ಲಿಕೇಶನ್: KSP ಮೊಬೈಲ್ ಅಪ್ಲಿಕೇಶನ್ ಮೂಲಕ ಸಾರ್ವಜನಿಕರು ಕರ್ನಾಟಕ ರಾಜ್ಯದ ಯಾವುದೇ ಪೊಲೀಸ್ ಠಾಣೆಯ ಫೋನ್ ನಂಬರ್‌ಗಳನ್ನು ಪಡೆದುಕೊಳ್ಳಲು ಹಾಗೂ ಮೊಬೈಲ್ ಫೋನ್, ಕ್ರೆಡಿಟ್/ಡೆಬಿಟ್ ಕಾರ್ಡ್, ವೈಯಕ್ತಿಕ ದಾಖಲಾತಿಗಳನ್ನು ಕಳೆದುಕೊಂಡಿದ್ದಲ್ಲಿ, ಪೊಲೀಸ್ ಠಾಣೆಗಳಿಗೆ ಹೋಗಿ ದೂರು ನೀಡದೇ ಮನೆಯಲ್ಲಿಯೇ ಕುಳಿತು KSP Mobile Application ಮುಖಾಂತರ ದೂರು ದಾಖಲಿಸಬಹುದಾಗಿದೆ. ಇದರಿಂದ ಸಾರ್ವಜನಿಕರ ಅನಗತ್ಯ ಅಲೆದಾಟವನ್ನು ತಪ್ಪಿಸಿ, ಮುಂದಿನ ಕಾನೂನಾತ್ಮಕ ಕ್ರಮಗಳಿಗೆ ಉಪಯುಕ್ತವಾಗಿದೆ.<br>• ಸಾಮಾಜಿಕ ಜಾಲತಾಣ ಮಾನಿಟರಿಂಗ್ ಸೆಲ್ : ಇದರ ಮೂಲಕ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾವಹಿಸಿ, ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟ ಮಾಹಿತಿಯನ್ನು ಸಂಗ್ರಹಿಸಿ, ಅಗತ್ಯ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ಇ-ಆಫೀಸ್: ಪೊಲೀಸ್ ಕಛೇರಿಯನ್ನು ಕಾಗದ ರಹಿತ ಕಛೇರಿಯನ್ನಾಗಿ ಮಾಡಲು ಹಾಗೂ ಕಡತಗಳ ನಿರ್ವಹಣೆಯಲ್ಲಿ ಪಾರದರ್ಶಕತೆಯನ್ನು ತರಲು e-Office ತಂತ್ರಾಂಶವನ್ನು ಬಳಸಲಾಗುತ್ತಿದೆ.<br>• M-CCTNS : ಮೊಬೈಲ್ ಅಪ್ಲಿಕೇಶನ್: ರಾತ್ರಿ ಗಸ್ತಿನ ಸಮಯದಲ್ಲಿ ಸಂಶಯಾಸ್ಪದ ವ್ಯಕ್ತಿಗಳ ಗುರುತು ಪತ್ತೆಗಾಗಿ ಫಿಂಗರ್ ಪ್ರಿಂಟ್ ಸ್ಕ್ಯಾನರ್, ವಾಹನ ಮಾಲಿಕರ ವಿಳಾಸ ತಿಳಿಯಲು ಸದರಿ ಅಪ್ಲಿಕೇಶನ್ ಬಳಕೆ ಮಾಡಲಾಗುತ್ತಿದೆ ಹಾಗೂ ಪಬ್ಲಿಕ್ ಸೇಫ್ಟಿ ಆಕ್ಟ್ ಪ್ರಕಾರ ಜಿಲ್ಲೆಯಲ್ಲಿರುವ ಎಲ್ಲಾ ಸಾರ್ವಜನಿಕರು ಹಾಗೂ ಸರ್ಕಾರದ ವತಿಯಿಂದ ಅಳವಡಿಸಿರುವ ಸಿಸಿ ಕ್ಯಾಮೆರಾಗಳ ಮಾಹಿತಿಯನ್ನು ಇದರಲ್ಲಿ ದಾಖಲಿಸಿದ್ದು, ಇದು ಅಪರಾಧ ಪತ್ತೆ ಕಾರ್ಯದಲ್ಲಿ ಸಹಕಾರಿಯಾಗುತ್ತದೆ.<br>• ಇ-ಎಫ್‌ಐಆರ್ ಸಾರ್ವಜನಿಕರು ದ್ವಿಚಕ್ರ ವಾಹನಗಳು ಕಳೆದುಹೋದ ಸಮಯದಲ್ಲಿ ನೇರವಾಗಿ ದೂರು ದಾಖಲಿಸಬಹುದಾಗಿದೆ. ಇದನ್ನು ಪೊಲೀಸರು ಆನ್‌ಲೈನ್ ಮೂಲಕ ದೂರು ಸ್ವೀಕರಿಸಿ ಸ್ವಯಂ ಚಾಲಿತವಾಗಿ FIR ದಾಖಲಿಸುವ ವ್ಯವಸ್ಥೆಯಾಗಿದೆ<br>• FLMS: ಜಿಲ್ಲೆಯಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆಯ ಸಮಯದಲ್ಲಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಅಭಿಪ್ರಾಯಕ್ಕೆ ಕೋರಿಕೆ ಸಲ್ಲಿಸಲು ಹಾಗೂ ವರದಿಗಳನ್ನು ಶೀಘ್ರವಾಗಿ ಪಡೆದುಕೊಳ್ಳಲು ಸಹಕಾರಿಯಾಗಿದೆ. |

ಹೆಚ್‌ಡಿ 647 ಎಸ್‌ಎಸ್‌ಟಿ 2024

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು.